**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 9737/2021 ಸಿ.ಡಬ್ಲೂ.6 ಪಿ.ಡಬ್ಲೂ.5

| | |
|---|---|
| ಹೆಸರು | ಶಶಿಕಲಾ |
| ತಂದೆ/ಗಂಡ | ಶಿವಪೂಜಪ್ಪಾ |
| ವಯಸ್ಸು | 60 ವರ್ಷ |
| ಉದ್ಯೋಗ | ಮನೆಗೆಲಸ |
| ವಾಸಸ್ಥಳ | ಮಾದನಹಿಪ್ಪರಗಾ |

ದಿನಾಂಕ 11-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ಆರೋಪಿತರು ನನಗೆ ಮೈದುನರಾಗಬೇಕು. ಚಾಸ-1 ನನ್ನ ಗಂಡ, ಚಾಸಾ 7 ನನ್ನ ಮಗಳು ಚಾಸಾ 2 ಮತ್ತು 3 ರವರ ಪರಿಚಯ ಇರುತ್ತಾರೆ. ಚಾಸಾ 4 ಮತ್ತು 5 ಪರಿಚಯ ಇರುವುದಿಲ್ಲ.

ಸುಮಾರು 5 ವರ್ಷಗಳ ಹಿಂದೆ ನಾನು ಮತ್ತು ಚಾಸಾ 1 ರವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಬಂದು ಚಾಸಾ 1 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ. ಆಗ ನನ್ನ ಮಗಳು ಚಾಸಾ 7 ರವರು ಜಗಳ ಬಿಡಿಸಲು ಬಂದಾಗ ಅವಳಿಗೂ ಸಹ ಕೊಡಲಿ ತೆಗೆದುಕೊಂಡು ಹೊಡೆದ ಕಾರಣ ಚಾಸಾ 1 ಮತ್ತು 7 ರವರಿಗೆ ತಲೆಯ ಮೇಲೆ ಗಾಯ ಆಗಿರುತ್ತದೆ. ನಾನು ಬಿಡಿಸಲು ಹೋದಾಗ ನನ್ನ ಕೂದಲು ಹಿಡಿದು ಜಗ್ಗಾಡಿರುತ್ತಾರೆ ಮತ್ತು ಸೀರೆಯ ಸೇರಗು ಹಿಡಿದು ಎಳದಾಡಿರುತ್ತಾರೆ. ಚಾಸಾ 1 ರವರಿಗೆ ಪ್ರಜ್ಞೆ ತಪ್ಪಿದ ಕಾರಣ ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದೇವು, ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಆಸ್ಪತ್ರೆಯಲ್ಲಿ ಸೇರಿಸಿಕೊಂಡಿರುವುದಿಲ್ಲ, ನಂತರ ಮನೆಯಲ್ಲಿ ಕರೆದುಕೊಂಡು ಬಂದು ಉಪಚಾರ ಮಾಡಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )

ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:

ಘಟನೆಯು ದಿಃ 19-07-2020 ರಂದು ಬೆ. 11.45 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 2ನೇ ಆರೋಪಿಯು ಚಾಸಾ 1 ರವರನ್ನು ತೆಕ್ಕಿಯಾಗೆ ಹಿಡಿದಾಗ 1ನೇ

ಆರೋಪಿಯು ಕೊಡಲಿಯಿಂದ ಎಡಭಾಗದ ಕುತ್ತಿಗೆಗೆ ಮತ್ತು ಬಲ ತಲೆಗೆ ಹೊಡೆದು ಎಡಭುಜಕ್ಕೆ ಚೂರಿರುತ್ತಾರೆ ಎಂದರೆ ಸರಿ. 2ನೇ ಆರೋಪಿಯು ಚಾಸಾ 7 ರವರಿಗೆ ಕೊಡಲಿಯಿಂದ ಎಡಗಡೆ ಹಣೆಯ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ನಾನು ಬಿಡಿಸಲು ಹೋದಾಗ 1ನೇ ಆರೋಪಿಯು ಕೂದಲು ಹಿಡಿದು ಜಗ್ಗಾಡಿ ಸೀರೆಯ ಸೇರಗು ಎಳೆದಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನಮಗೆ ಇನ್ನೊಮ್ಮೆ ಸಿಕ್ಕರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನನಗೆ ಯಾವುದೇ ಗಾಯಾಗದ ಕಾರಣ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ, ಚಾಸಾ 1 ಮತ್ತು 7 ರವರು ಮಾತ್ರ ಹೋಗಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾಲನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರಃ ಎಮ್. ವಿ. ಇ. ವಕೀಲರಿಂದ:

ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಅವರ ಹೇಳಿಕೆಯನ್ನು ತೋರಿಸಿ ಅದರಲ್ಲಿ ಏನು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ ಅಂತಾ ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಚಾಸಾ 7 ರವರು ಪೋಲಿಸರ ಮುಂದೆ ಹೇಳಿ ಬರೆಸಿರುತ್ತಾರೆ ಎಂದರೆ ಸರಿ. ಚಾಸಾ 1 ರವರಿಗೆ ಪ್ರಜ್ಞೆ ಇಲ್ಲದ ಕಾರಣ ದೂರನ್ನು ಚಾಸಾ 7 ರವರು ಬರೆಸಿರುತ್ತಾರೆ ಎಂದರೆ ಸರಿ. ಘಟನೆ ಯಾವ ದಿನಾಂಕದಂದು ಆಗಿರುತ್ತದೆ ಅಂತಾ ನನಗೆ ಹೇಳಲು ಬರುವುದಿಲ್ಲ. ಘಟನೆ ನಡೆದಾಗ 4 ಜನ ಮಾತ್ರ ಇದ್ದರು, ಅಕ್ಕಪಕ್ಕದವರು ಇರಲಿಲ್ಲ. 4 ಜನರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಘಟನೆ ನಡೆದಾಗ ಅಲ್ಲಿ 4 ಜನ ಇದ್ದರು ಅಂತಾ ಪೋಲಿಸರ ಮುಂದೆ ಹೇಳಿ ಬರೆಸಿದ ಬಗ್ಗೆ ಚಾಸಾ 7 ರವರಿಗೆ ಗೊತ್ತು. ಜಮೀನಿನ ಬಗ್ಗೆ ತಕರಾರು ಆಗಿದ್ದು, ಸದರಿ ಜಮೀನು ನನ್ನ ಮಾವ ಈರಣ್ಣಾ ರವರ ಹೆಸರಿನಲ್ಲಿ ಇರುತ್ತದೆ. ಇವತ್ತಿನವರೆಗೂ ನಮ್ಮ ಮಾವನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಜಮೀನು 12 ಎಕರೆ ಇರುತ್ತದೆ. ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಒಂದು ಜಮೀನು ಸರ್ವೆ ನಂಬರ 379/1, 6 ಎಕರೆ 10 ಗುಂಟೆ ಇದ್ದು, ಇನ್ನೊಂದು ಜಮೀನು ಸರ್ವೆ ನಂಬರ 380/1, ಇದು 4 ಎಕರೆ ಇರುತ್ತದೆ ಎಂದರೆ ಸರಿ. ಎರಡು ಜಮೀನು ಸೇರಿ 10 ಎಕರೆ 10 ಗುಂಟೆ ಆಗುತ್ತದೆ ಎಂದರೆ ಸರಿ. ಇಲ್ಲಿಯವರೆಗೂ ದಾಖಲೆಯ ಮುಖಾಂತರ ಪಾಲು ವಾಟ್ನಿ ಆಗಿಲ್ಲ ಎಂದರೆ ಸರಿ. ಚಾಸಾ 1 ಮತ್ತು ಅವರ ಸಹೋದರರು ಬೇರೆ ಬೇರೆ ಪಟ್ಟಿಗಳನ್ನು ಮಾಡಿಕೊಂಡು ಅವರವರ ಜಮೀನುಗಳನ್ನು ಅವರವರೆ ಸಾಗುವಳಿ ಮಾಡುತ್ತಾರೆ ಎಂದರೆ ಸರಿ. ಚಾಸಾ 1 ರವರ ಜಮೀನಿನ ಪೂರ್ವ ದಿಕ್ಕಿಗೆ ಯಾರು ಜಮೀನು ಬರುತ್ತದೆ ಎಂದರೆ ನನಗೆ ದಿಕ್ಕುಗಳು ತಿಳಿಯವುದಿಲ್ಲ ಅಂತಾ ನುಡಿಯುತ್ತಾರೆ. ನಮ್ಮ ಜಮೀನಿನ ಪಕ್ಕದಲ್ಲಿ ವಿವೇಕಾನಂದರವರು ಜಮೀನು ಇರುತ್ತದೆ ಎಂದರೆ ಸರಿ. ಅವರ ಜಮೀನಿನ ಪಕ್ಕದಲ್ಲಿ ದೇವೆಂದ್ರರವರ ಜಮೀನು ಇರುತ್ತದೆ ಎಂದರೆ ಸರಿ. ದೇವೇಂದ್ರರವರ ಜಮೀನಿನ ಪಕ್ಕದಲ್ಲಿ ಸಿದ್ದಾರೂಢ 2ನೇ ಆರೋಪಿಯ ಜಮೀನು ಇರುತ್ತದೆ ಎಂದರೆ ಸರಿ. ಅವರ ಜಮೀನಿನ ಪಕ್ಕ 1ನೇ ಆರೋಪಿಯ ಜಮೀನು ಇರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಅಕ್ಕಪಕ್ಕದಲ್ಲಿ ಆರೋಪಿತರ ಜಮೀನು ಬರುವುದಿಲ್ಲ ಎಂದರೆ ಸರಿ. ನಮ್ಮ ಮಾವನ ಈರಣ್ಣಾ ರವರ ಜಮೀನನ ಪೂರ್ವಕ್ಕೆ ಬಸವರಾಜರವರ ಜಮೀನು, ಪಶ್ಚಿಮಕ್ಕೆ ವಾಡಿ ಗ್ರಾಮದ ರಸ್ತೆ, ಉತ್ತರ ದಿಕ್ಕಿಗೆ ಶಿವಾನಂದ ಪಾಟೀಲ

ರವರ ಜಮೀನು, ದಕ್ಷಿಣ ದಿಕ್ಕಿಗೆ ರಾಜಶೇಖರ ಅಸಷ್ಟಗಿರವರ ಜಮೀನು ಇರುತ್ತದೆ ಎಂದರೆ ಸರಿ. ಘಟನೆಯಾದಾಗ ಜಮೀನಿನಲ್ಲಿ ಕಸತೆಗೆಯುವುದು ಮತ್ತು ಬಿತ್ತನೆ ಮಾಡುವ ಸಮಯ ಇತ್ತು ಎಂದರೆ ಸರಿ. ಜನರು ಅವರವರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಜಮೀನಿ ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯ ಮೇಲೆ ಜನರು ಓಡಾಡುತ್ತಿದ್ದರು ಎಂದರೆ ಸರಿ. ಘಟನೆಯಾದ ನಂತರ ಮೊದಲು ಪೋಲಿಸ್ ಠಾಣೆಗೆ ಚಾಸಾ 7 ರವರು ದ್ವಿಚಕ್ರ ವಾಹನದ ಮೇಲೆ ಕರೆದುಕೊಂಡು ಹೋಗಿರುತ್ತಾರೆ. ಮೊದಲು ದೂರನ್ನು ಸಲ್ಲಿಸಿ ನಂತರ ಆಸ್ಪತೆಗೆ ಹೋಗಿರುತ್ತೇವೆ. ಪೋಲಿಸ್ ಠಾಣೆಗೆ ಹೋದಾಗ ಎಷ್ಟು ಸಮಯ ಆಗಿತ್ತು ಅಂತಾ ಹೇಳಲು ಬರುವುದಿಲ್ಲ. ಪೋಲಿಸ್ ಠಾಣೆಯಲ್ಲಿ ಅಂದಾಜು ಒಂದು ಗಂಟೆಯವರೆಗೆ ಇದ್ದೇವು. ನಂತರ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿ. ಆಸ್ಪತ್ರೆಗೆ ಹೋದಾಗ ಎಷ್ಟು ಸಮಯ ಆಗಿತ್ತು ಅಂತಾ ನನಗೆ ಗೊತ್ತಿಲ್ಲ. ಮಾದನ ಹಿಪ್ಪರಗಾ ಎಷ್ಟು ಗಂಟೆಯವರೆಗೆ ಚಿಕಿತ್ಸೆ ಮಾಡಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ಮಾದನ ಹಿಪ್ಪರಗಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲು ಮಾಡಿಕೊಂಡಿರುವುದಿಲ್ಲ, ನಂತರ ಪೋಲಿಸರು ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಆದರೆ ಕಲುಬುರಗಿಯ ಸರ್ಕಾರಿ ಆಸ್ಪತ್ರೆ ಮತ್ತು ಬೇರೆ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡಿರುವುದಿಲ್ಲ. ಕೋವಿಡ್ ಇದ್ದ ಕಾರಣ ಚಿಕಿತ್ಸೆ ಮಾಡಿರುವುದಿಲ್ಲ ಎಂದರೆ ಸರಿ. ಮರಳಿ ಮಾದನ ಹಿಪ್ಪರಗಾಕ್ಕೆ ಕರೆದುಕೊಂಡು ಬಂದು ಚಿಕಿತ್ಸೆ ಮಾಡಿರುತ್ತೇವೆ ಎಂದರೆ ಸರಿ. ಚಾಸಾ 1 ಮತ್ತು 7 ರವರಿಗೆ ಗಾಯ ಆಗಿ ರಕ್ತ ಬಟ್ಟೆಗೆ ಹತ್ತಿತ್ತು, ಸದರಿ ಬಟ್ಟೆಯನ್ನು ಪೋಲಿಸರು ತೆಗೆದುಕೊಂಡು ಹೋಗಿರುತ್ತಾರೆ .ಮು.ಮಾಲು. 1 ಚಾಸಾ 1 ರವರು ಪೋಲಿಸರಿಗೆ ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತಾರೆ. ಕೊಡಲಿ ಎಷ್ಟು ದಪ್ಪ ಮತ್ತು ಎಷ್ಟು ಉದ್ದ ಅಂತಾ ಗೊತ್ತಾಗುವುದಿಲ್ಲ ಎಂದರೆ ಸರಿ. ಪೋಲಸರು ಕೊಡಲಿಯ ಬಗ್ಗೆ ಎನು ಬರೆದುಕೊಂಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಶಾಲೆ ಕಲಿತ್ತಿಲ್ಲ ಅಂತಾ ನುಡಿಯುತ್ತಾರೆ. ಪೋಲಿಸರು ಕೊಡಲಿ ಭಾವ ಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ಕೊಡಲಿಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿ.

ಸುಮಾರು 5 ವರ್ಷಗಳ ಹಿಂದೆ ನಾನು ಮತ್ತು ಚಾಸಾ 1 ರವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಬಂದು ಚಾಸಾ 1 ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನನ್ನ ಮಗಳು ಚಾಸಾ 7 ರವರು ಜಗಳ ಬಿಡಿಸಲು ಬಂದಾಗ ಅವಳಿಗೂ ಸಹ ಕೊಡಲಿ ತೆಗೆದುಕೊಂಡು ಹೊಡೆದ ಕಾರಣ ಚಾಸಾ 1 ಮತ್ತು 7 ರವರಿಗೆ ತಲೆಯ ಮೇಲೆ ಗಾಯ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಡಿಸಲು ಹೋದಾಗ ನನ್ನ ಕೂದಲು ಹಿಡಿದು ಜಗ್ಗಾಡಿರುತ್ತಾರೆ ಮತ್ತು ಸೀರೆಯ ಸೇರಗು ಹಿಡಿದು ಎಳದಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಪ್ರಜ್ಞೆ ತಪ್ಪಿದ ಕಾರಣ ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದೇವು, ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಆಸ್ಪತ್ರೆಯಲ್ಲಿ ಸೇರಿಸಿಕೊಂಡಿರುವುದಿಲ್ಲ, ನಂತರ

ಮನೆಯಲ್ಲಿ ಕರೆದುಕೊಂಡು ಬಂದು ಉಪಚಾರ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ